155-330-1

04/03/2025

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಶಾಂತಾರಾಮ ಬುಡ್ನ ಸಿದ್ದಿ ಇವರು 330ನೇ ನಿಯಮದಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆ - "ಉತ್ತರ ಕನ್ನಡ ಜಿಲ್ಲೆಯ ರೈತರಿಗೆ ಸೊಪ್ಪಿನ ಬೆಟ್ಟ, ಕುಮಕಿ, ಸ್ಟ್ರೀಪ್‌ಗಳ ಬಳಕೆ ಹಾಗೂ ಪಾರಂಪರಿಕ ಅತಿಕ್ರಮಣ ಮತ್ತು ಕಾಡು ಪ್ರಾಣಿಗಳಿಂದ ಆಗುತ್ತಿರುವ ಜೀವಿ ಹಾನಿ ಹಾಗೂ ಬೆಳೆ ಹಾನಿಗೆ ಪರಿಹಾರ ನೀಡುವುದರಲ್ಲಿ ಆಗುವ ತೊಂದರೆ ಕುರಿತು" ವಿಷಯಕ್ಕೆ ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಹೇಳಿಕೆ.**

*****

ಕರ್ನಾಟಕ ಅರಣ್ಯ ಕೈಪಿಡಿ, 1976ರಂತೆ ಅರಣ್ಯ ಭೂಮಿಗಳಲ್ಲಿ ರೈತರಿಗೆ ಸೊಪ್ಪಿನ ಬೆಟ್ಟ, ಕುಮ್ಕಿ, ಸ್ಟ್ರಿಪ್ ಮುಂತಾದ ವಿಶೇಷ ಸವಲತ್ತುಗಳಿಗೆ ಮಾನ್ಯತೆ ನೀಡಲಾಯಿತು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಸೊಪ್ಪಿನ ಬೆಟ್ಟಗಳೆಂದರೆ ಅಡಿಕೆ ತೋಟಗಳಿಗೆ ತಮ್ಮ ತೋಟದ ನಿರ್ವಹಣೆಗಾಗಿ ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸುವ ಉದ್ದೇಶದಿಂದ ನೀಡಲಾದ ಸಂರಕ್ಷಿತ ಅರಣ್ಯ ಪ್ರದೇಶ, ತೋಟಗಾರರಿಗೆ ಬೆಟ್ಟ ಪ್ರದೇಶಗಳಲ್ಲಿ ತಮ್ಮ ಸ್ವಂತ ದನಕರುಗಳನ್ನು ಮೇಯಿಸುವ, ಸ್ವಂತ ಉಪಯೋಗಕ್ಕಾಗಿ ಹುಲ್ಲು ಮತ್ತು ದರಕು ಸೊಪ್ಪು ಬಳಸಿಕೊಳ್ಳಲು ಸೌಲಭ್ಯಗಳನ್ನು ನೀಡಲಾಗಿದೆ. ವಿಭಾಗೀಯ ಅರಣ್ಯ ಅಧಿಕಾರಿಯ ಪೂರ್ವಾನುಮತಿಯಿಲ್ಲದೇ ಕೆಲವು ಜಾತಿಯ ಜೀವಂತ ಮರಗಳನ್ನು ಸಹ ಕಡಿಯಬಾರದೆಂದು ಸೂಚಿಸಲಾಗಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಸ್ಟ್ರಿಪ್ ಬಳಕೆಯಲ್ಲಿದ್ದು, ಸಾರ್ವಜನಿಕರ ಹಿತದೃಷ್ಟಿಯಿಂದ ಹಾಗೂ ಕಾಡುಪ್ರಾಣಿಗಳಿಂದ ಬೆಳೆಗಳನ್ನು ಸಂರಕ್ಷಿಸುವ ಸಲುವಾಗಿ ಜನವಸತಿ ಪ್ರದೇಶ ಹಾಗೂ ಕೃಷಿ ಪ್ರದೇಶಗಳ ಸುತ್ತ ಸ್ಟ್ರಿಪ್ಸ್ ಬಳಕೆದಾರರಿಗೆ ವಿಶೇಷ ಸೌಲಭ್ಯಗಳನ್ನು ಒದಗಿಸಲಾಗಿರುತ್ತದೆ.

ಸದರಿ ವಿಶೇಷ ಸೌಲಭ್ಯಗಳನ್ನು ಅರಣ್ಯ ಪ್ರದೇಶಗಳಲ್ಲಿ ಅರಣ್ಯ ಸಂರಕ್ಷಣಾ ಕಾಯ್ದೆ 1980ರ ನಿಯಮಗಳು ಉಲ್ಲಂಘನೆಯಾಗದಂತೆ ಬಳಕೆದಾರರು ಬಳಕೆ ಮಾಡಬಹುದಾಗಿರುತ್ತದೆ.

ಪಾರಂಪರಿಕ ಅತಿಕ್ರಮಣದಾರರ ಅರಣ್ಯ ಹಕ್ಕು ಕಾಯ್ದೆಯಡಿ ಸಲ್ಲಿಸಿದ ಅರ್ಜಿಗಳನ್ನು ವಿವಿಧ ಮಟ್ಟದ ಅರಣ್ಯ ಹಕ್ಕು ಸಮಿತಿಗಳಲ್ಲಿ ಪರಿಶೀಲಿಸಿ, ಹಕ್ಕು ಪತ್ರ ನೀಡಲು ಸರ್ಕಾರವು ಕ್ರಮ ಕೈಗೊಳ್ಳಲಾಗಿರುತ್ತದೆ.

ಮುಂದುವರೆದು, ಕಾಡು ಪ್ರಾಣಿಗಳಿಂದ ಆಗುತ್ತಿರುವ ಜೀವ ಹಾನಿ ಮತ್ತು ಬೆಳೆ ಹಾನಿಗೆ ಸಂಬಂಧಿಸಿದಂತೆ i) ಸರ್ಕಾರಿ ಆದೇಶ ಸಂಖ್ಯೆ: ಅಪಜೀ.156.ಎಫ್.ಡಬ್ಲ್ಯೂ.ಎಲ್.2022, ದಿನಾಂಕ: 18-01-2023 & ii) ಸರ್ಕಾರಿ ಆದೇಶ ಸಂಖ್ಯೆ: ಅಪಜೀ.156.ಎಫ್.ಡಬ್ಲ್ಯೂ.ಎಲ್.2022, ದಿನಾಂಕ:24-05-2023ರಲ್ಲಿ ನಿಗದಿಪಡಿಸಿದಂತೆ ಪರಿಹಾರ ಧನವನ್ನು ನಿಯಮಾನುಸಾರ ನೀಡಲಾಗುತ್ತಿದೆ. e-parihara mobile application ಬಳಕೆ ಮಾಡಿ ತ್ವರಿತಗತಿಯಲ್ಲಿ ವಿಲೇವಾರಿ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

**ಸಂಖ್ಯೆ: ಅಪಜೀ 35 ಎಫ್‌ಡಬ್ಲ್ಯೂಎಲ್ 2025**

(signature)

**(ಈಶ್ವರ ಬಿ.ಖಂಡ್ರೆ)**
**ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು**